ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 28/12/2019

# 6.5 ಲಕ್ಷ ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ

ಉ.ವಾ. 28/12/19

ನವದೆಹಲಿ: ಪ್ರಧಾನಮಂತ್ರಿ ಆವಾಸ ಯೋಜನೆಯಡಿ ಮತ್ತೆ 6.5 ಲಕ್ಷ ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಶುಕ್ರವಾರ ಸಮ್ಮತಿ ನೀಡಿದ್ದು, ಈ ಮೂಲಕ ಯೋಜನೆಯಡಿ ಸುಮಾರು ಒಂದು ಕೋಟಿ ಮನೆಗಳ ನಿರ್ಮಾಣಕ್ಕೆ ಹಣಕಾಸು ನೆರವು ನೀಡಿದಂತಾಗಿದೆ. ಕೇಂದ್ರ ಗೃಹ ಮತ್ತು ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಈ ವಿಚಾರ ತಿಳಿಸಿದ್ದು, ಮುಂದಿನ 3–4 ತಿಂಗಳಲ್ಲಿ ಸಚಿವಾಲಯವು ಎಲ್ಲ 1.12 ಕೋಟಿ ಮನೆಗಳ ನಿರ್ಮಾಣಕ್ಕೆ ನೆರವು ನೀಡಿದಂತಾಗಲಿದೆ ಎಂದಿದ್ದಾರೆ.

ಪಿಎಂಎವೈ ಯೋಜನೆಯನ್ವಯ ಈವರೆಗೆ ಸುಮಾರು 5.70 ಲಕ್ಷ ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. 1.12 ಕೋಟಿ ಮನೆಗಳ ನಿರ್ಮಾಣವು ಸರ್ಕಾರ ಟಾರ್ಗೆಟ್ ಆಗಿದ್ದು, ಅದು ಪೂರ್ಣಗೊಳ್ಳುವಾಗ ಒಟ್ಟಾರೆ 7 ಲಕ್ಷ ಕೋಟಿ ರೂ.ಗಳನ್ನು ಇದಕ್ಕಾಗಿ ವಿನಿಯೋಗಿಸಿದಂತಾಗಲಿದೆ ಎಂದೂ ಸಚಿವಾಲಯ ಹೇಳಿದೆ. ಈ ಕುರಿತು ಶುಕ್ರವಾರ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, 'ಇದೊಂದು ಅದ್ಭುತ ಹಾಗೂ ಸ್ಮರಣೀಯ ಸಾಧನೆ' ಎಂದು ಬರೆದುಕೊಂಡಿದ್ದಾರೆ. ಈ ಯೋಜನೆಯು ಪಾರದರ್ಶಕತೆ, ತಂತ್ರಜ್ಞಾನದ ಬಳಕೆ ಮತ್ತು ತ್ವರಿತ ಅನುಷ್ಠಾನಕ್ಕೆ ಸಾಕ್ಷಿ. ನಗರಾಭಿವೃದ್ಧಿ ಇಲಾಖೆಯ ಇಡೀ ತಂಡಕ್ಕೆ ನಾನು ಅಭಿನಂದಿಸುತ್ತೇನೆ. ಭಾರತೀಯರಿಗೆ ಸೂರು ಕಲ್ಪಿಸುವ ಬದ್ಧತೆಯನ್ನೂ ಶ್ಲಾಘಿಸುತ್ತೇನೆ ಎಂದಿದ್ದಾರೆ.